# 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

## C .C.No. 449/23

| | | |
|---|---|---|
| **ಹೆಸರುಃ** | **ಚಂದ್ರು** | **CW**- 4 |
| **ತಂದೆ/ಗಂಡ ಹೆಸರುಃ** | **ಕೃಷ್ಣ ಶೆಟ್ಟಿ** | **PW**- 9 |
| **ವಯಸ್ಸುಃ** | **50 ವರ್ಷ** | |
| **ವೃತ್ತಿಃ** | **ಕೂಲಿ ಕೆಲಸ** | |
| **ವಿಳಾಸಃ** | **ಕುಂಬಾರಗೇರಿ** | **ದಿನಾಂಕಃ 29.07.2026.** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ನನಗೆ ಚಾಸಾ.1 ರವರ ಪರಿಚಯ ಇಲ್ಲ. ಚಾಸಾ.6 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇಲ್ಲ. ಸಾಕ್ಷಿದಾರರು ನಿಪಿ.4 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.4ಸಿ ಎಂದು ಗುರುತಿಸಲಾಯಿತು. ನಿಪಿ.4 ರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ. 4-5 ವರ್ಷಗಳ ಹಿಂದೆ ಪೊಲೀಸರು ಜೀಪಿನಲ್ಲಿ ಕೆ ಇ ಬಿ ಕಚೇರಿಗೆ ನನ್ನನ್ನು ಕರೆದುಕೊಂಡು ಹೋಗಿದ್ದು, ಅಲ್ಲಿ ಒಂದು ದಾಖಲೆಗೆ ಸಹಿ ಮಾಡಿಸಿರುತ್ತಾರೆ. ಅದನ್ನು ಹೊರತುಪಡಿಸಿ ಪ್ರಕರಣದ ಬಗ್ಗೆ ನನಗೆ ಬೇರೆ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ.**

ದಿಃ 03.12.2022 ರಂದು ಆರೋಪಿಯು ಚಾಸಾ.1 ರವರಿಂದ ಹಣ ಪಡೆದ ಸ್ಥಳವನ್ನು ತೋರಿಸುವುದಾಗಿ ಪೊಲೀಸರ ಮುಂದೆ ಸ್ವಃಇಚ್ಛಾ ಹೇಳಿಕೆಯನ್ನು ನೀಡಿದ್ದು, ಅದರಂತೆ ಸದರಿ ಸ್ಥಳದಲ್ಲಿ ಪಂಚನಾಮೆ ಜರುಗಿಸಲು ಪಂಚರಾಗಿ ಹಾಜರಿದ್ದು ಸಹಕರಿಸುವಂತೆ ಪೊಲೀಸರು ಕೋರಿಕೊಂಡಿದ್ದರಿಂದ ನಾನು ಪೊಲೀಸರೊಂದಿಗೆ ಸದರಿ ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿ ಪೊಲೀಸರು ಆರೋಪಿ ತೋರಿಸಿದಂತೆ ಸಮಯ 11.30 ರಿಂದ 12.10 ರವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ನಾನು ಮತ್ತು ಚಾಸಾ.6 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 03.12.2022 ರಂದು ಪೊಲೀಸರಿಗೆ ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಹೇಳಿಕೆಯನ್ನು ಓದಿ ಹೇಳಲಾಗಿ ಸಾಕ್ಷಿದಾರರು ಸದರಿ ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ನಿಪಿ. 10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**